ವಿಷಯ : ಹುನಗುಂದ ತಾಲ್ಲೂಕಿನ ಅಮಿನಗಡ ಗ್ರಾಮದಲ್ಲಿ ಕೈಮಗ್ಗ ತರಬೇತಿ ಕೇಂದ್ರ ಪ್ರಾರಂಭಿಸುವ ಬಗ್ಗೆ.

ಪ್ರ. 101 (77) ಶ್ರೀ ಮಲ್ಲಿಖಾರ್ಜುನವೀರಪ್ಪ ಬನ್ನಿ (ಗುಳೇದ್‌ಗುಡ್ಡ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹುನಗುಂದ ತಾಲ್ಲೂಕಿನ ಅಮಿನಗಡ ಗ್ರಾಮದಲ್ಲಿ 1977 ರಲ್ಲಿ ಕೈಮಗ್ಗ ತರಬೇತಿ ಕೇಂದ್ರ ಪ್ರಾರಂಭಿಸುವ ಯೋಜನೆಗೆ ಮಂಜುರಾತಿ ದೊರತಿದ್ದು ಅದನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಆ) ರಾಜ್ಯ ಸರ್ಕಾರದವರು ಈ ಯೋಜನೆಯನ್ನು ಪೂರ್ಣಗೊಳಿಸಲು ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) 1977ರಲ್ಲಿ ಕೈಮಗ್ಗ ತರಬೇತಿ ಕೇಂದ್ರ ಪ್ರಾರಂಭಿಸುವ ಯೋಜನೆಗೆ ಮಂಜೂರಾತಿ ದೊರೆತಿಲ್ಲ.

(ಆ) ಮೇಲಿನ (ಅ) ಉತ್ತರದಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ವಿಷಯ : ಬಾದಾಮಿ ತಾಲ್ಲೂಕಿನಲ್ಲಿ ಮಿನಿ ಸಿಮೆಂಟ್ ಕಾರ್ಖಾನೆ ಪ್ರಾರಂಭಿಸುವುದು.

ಪ್ರ. 103 (84) ಶ್ರೀ ಮಲ್ಲಿಖಾರ್ಜುನ ವೀರಪ್ಪ ಬನ್ನಿ (ಗುಳೇದ್‌ಗುಡ್ಡ). — ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬಾದಾಮಿ ತಾಲ್ಲೂಕಿನಲ್ಲಿ ಒಂದು ಸಣ್ಣ ಪ್ರಮಾಣದ ಸಿಮೆಂಟ್ ಕಾರ್ಖಾನೆಯನ್ನು ಸರ್ಕಾರ ಪ್ರಾರಂಭಿಸುವ ಸಲಹೆ ಸರಕಾರದವರಲ್ಲಿದೆಯೆ ;

(ಆ) ಹಾಗಿದ್ದಲ್ಲಿ ಈ ಹೊಸ ಯೋಜನೆಯ ರೂಪರೇಖೆಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) :—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ವಿ. ಎಲ್. ಪಾಟೀಲ್ (ಮಾನ್ಯ ಕಂದಾಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ. 1964ನೇ ಇಸವಿಯ ಕರ್ನಾಟಕ ಭೂ ಕಂದಾಯ ಶಾಸನದ 194 (2)ನೇ ಕಲಮಿನ ಮೇರೆಗೆ—

" 1982–83ನೇ ಸಾಲಿನ ಸಂಡೂರು ತಾಲ್ಲೂಕಿನ 46 ಗ್ರಾಮಗಳ ಭೂ ಕಂದಾಯವನ್ನು ಮಾಫಿ (ಮನ್ನಾ) ಮಾಡುವುದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಆರ್‌ಡಿ 48 ಟಿಆರ್‌ಎಂ 83ನೇ ಸಂಖ್ಯೆಯ 22ನೇ ಆಗಸ್ಟ್ 1983ನೇ ದಿನಾಂಕದ ಅಧಿಸೂಚನೆಯನ್ನು " ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಮಾನ್ಯ ಸಾರಿಗೆ ಸಚಿವರು).— ಮಾನ್ಯ ಅಧ್ಯಕ್ಷರೇ, ನಾನು ಈ ಕೆಳಗಿನ ನೋಟಿಫಿಕೇಷನ್‌ನ್ನು ವಾಹನ ಕಾಯಿದೆ 1939ರ ಸೆಕ್ಷನ್ 133 (3) ರ ಪ್ರಕಾರ ಸಭೆಯ ಮುಂದೆ ಮಂಡಿಸ ಬಯಸುತ್ತೇನೆ.

(ಅ) ನೋಟಿಫಿಕೇಷನ್ ನಂ. ಹೆಚ್‌ಡಿ 42 ಟಿಎಂಆರ್ 80 ತಾ : 16ನೇ ಜೂನ್ 1983. ಕರ್ನಾಟಕ ವಾಹನ ಕಾಯಿದೆ (8ನೇ ತಿದ್ದುಪಡಿ) 1983.

(ಆ) ನೋಟಿಫಿಕೇಷನ್ ನಂ. ಹೆಚ್‌ಡಿ 16 ಟಿಎಂಆರ್ 83 ತಾ : 12ನೇ ಆಗಸ್ಟ್ 1983. ಕರ್ನಾಟಕ ವಾಹನ ಕಾಯಿದೆ (9ನೇ ತಿದ್ದುಪಡಿ) 1983.

ANNOUNCEMENT

MR. SPEAKER :— I wish to inform the Hon. Members that after the House met during the March, 1983 there was a request from Byadagi Commission of inquiry constituted by the Government to go

into the Bellary incidents for furnishing proceedings of the House relating to the subject. When the House is not in session and the proceedings are still under print the normal practice has been to permit supply of the proceedings by the Secretariat and then bring the matter to the Commission with specific instructions that the copies supplied should be exclusively for the use of the Commission and not to be quoted till the proceedings are printed.

ವರದಿಗಳ ಮಂಡನೆ

ವಿಷಯ: ಗೋಪಿನಾಥಂ ಕೆರೆಯ ಬಗ್ಗೆ:—ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ವರದಿ

ಶ್ರೀ ಎಂ. ವೀರಪ್ಪಮೊಯ್ಲಿ.—ಸ್ವಾಮಿ: ಈ ಕೆಳಕಂಡ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯನ್ನು ನಾನು ಸಭೆಯ ಮುಂದೆ ಮಂಡಿಸುವುದಕ್ಕೆ ಇಷ್ಟಪಡುತ್ತೇನೆ.

"ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಏಳನೆಯ ವರದಿಯಲ್ಲಿ (1980–82) (ಆರನೇ ವಿಧಾನ ಸಭೆ) ನೀರಾವರಿ ಇಲಾಖೆಯ ಗೋಪಿನಾಥಂ ಕೆರೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಮೊದಲಾದ ಶಿಫಾರಸುಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಮೊದಲನೆಯ ವರದಿ."

ನಿಯಮ 334ರ ಕೆಳಗೆ ಕಳುಹಿಸಿರುವ ವಿಷಯಗಳ ಬಗ್ಗೆ:

ವಿಷಯ: ಗುಲ್ಬರ್ಗದಲ್ಲಿ ಕ್ರಾಂತಿ ಪತ್ರಿಕೆ ಸಂಪಾದಕ ಶ್ರೀ ಸಿದ್ಧರಾಮೇಶ್ವರರವರನ್ನು ಪೋಲೀಸರು ಹೊಡೆದರು ಎಂಬ ಬಗ್ಗೆ.

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೆ, ಮೊನ್ನೆ ರೂಲ್ 334ರ ಪ್ರಕಾರ ಒಂದು ವಿಷಯವನ್ನು ಎತ್ತಿದಾಗ ಈಗ 5 ಗಂಟೆಯಾಗಿದೆ. ಆದ್ದರಿಂದ ಆಗುವುದಿಲ್ಲವೆಂದು ತಾವು ಸಭೆಯನ್ನು ಮುಂದಕ್ಕೆ ಹಾಕಿದಿರಿ. ಆದ್ದರಿಂದ ಅದನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಬೇರೆ ವಿಚಾರವನ್ನು ತೆಗೆದುಕೊಳ್ಳೋಣ. ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳಬೇಕಾದರೆ ಮಾನ್ಯ ಮುಖ್ಯ ಮಂತ್ರಿಯವರೇ ಬರಬೇಕೆಂದು ತಾವು ಕೇಳುತ್ತಿದ್ದೀರಿ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಬರಲಿಲ್ಲ. ಅವರು ಬರಲಿ...

ಶ್ರೀ ಧರ್ಮಸಿಂಗ್.—ಅವರು ಇಲ್ಲ ಎಂದರೆ ಅದು ಹೇಗಾಗುತ್ತದೆ? ಮುಖ್ಯ ಮಂತ್ರಿಗಳೇ ಬಂದು ನಮಗೆ ಹೇಳಿಕೆಯನ್ನು ಕೊಡಬೇಕೆಂದು ನಾವು ಕೇಳಿದ್ದೇವೆ. ಆದರೆ ಅವರು ಇವತ್ತೂ ಬಂದಿಲ್ಲ. ನಿನ್ನೆಯ ದಿವಸ ಇದರ ಬಗ್ಗೆ ಯಾವುದೇ ತೀರ್ಮಾನಕ್ಕೂ ಬರಲಿಲ್ಲ. ಆದ್ದರಿಂದ ಇವತ್ತು ಇದರ ಬಗ್ಗೆ ಚರ್ಚೆಯಾಗ ಬೇಕು.

ಅಧ್ಯಕ್ಷರು.—ತಾವು ಕೇಳಿದ್ದೀರಿ. ಅದು ರೆಕಾರ್ಡ್‌ನಲ್ಲಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇದಕ್ಕೆ ಸಂಬಂಧಪಟ್ಟ ರಾಜ್ಯ ಸಚಿವರು ಇದ್ದಾರೆ. ಅವರು ಉತ್ತರ ಕೊಡುವುದಾದರೆ ನನ್ನ ಅಭ್ಯಂತರ ಇಲ್ಲವೆಂದು ಅವರು ಹೇಳಿದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳೇ ಬರಬೇಕೆಂದು ತಾವು ಒತ್ತಾಯ ಮಾಡುತ್ತಿದ್ದೀರಿ.

ಶ್ರೀ ಧರ್ಮಸಿಂಗ್.—ನಾವು ಎಲ್ಲ ರೀತಿಯಲ್ಲೂ ತಮಗೆ ಹೇಳಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳೇ ಬರಬೇಕೆಂದು ನಾವು ಕೇಳಿದ್ದೇವೆ. ಅವರು ಬರುತ್ತಾರೆ, ಅವರನ್ನು ಕರೆಸುತ್ತೇನೆಂದು ತಾವೂ ಹೇಳಿದ್ದೀರಿ. ನಾವು ಪದೇ ಪದೇ ಪ್ರಸ್ತಾಪ ಮಾಡಿದಾಗಲೂ ರಾಜ್ಯದ ಮುಖ್ಯ ಮಂತ್ರಿಗಳಾಗಿ ಪ್ರಮುಖವಾದ ಚರ್ಚೆಗೆ ಅವರು ಬರಲಿಲ್ಲ ಎಂದರೆ ನಾವು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

(ಮುಂದಲ)